ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1) | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 113 |
| 2) | ಮಾನ್ಯ ಸದಸ್ಯರ ಹೆಸರು | ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು) |
| 3) | ಉತ್ತರಿಸಬೇಕಾದ ದಿನಾಂಕ | 13-09-2021 |
| 4) | ಉತ್ತರಿಸುವವರು | ಮಾನ್ಯ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು |

| ಪ್ರಶ್ನೆ | ಉತ್ತರ | Answer |
|---|---|---|
| ಅ).ಕೌಶಲ್ಯಾಭಿವೃದ್ಧಿ ಯೋಜನೆಯಡಿ ಕಳೆದ ಎರಡು ವರ್ಷಗಳ ಅವಧಿಯಲ್ಲಿ ಕೈಗೊಳ್ಳಲಾದ ಯೋಜನೆಗಳಾವುವು? | **<u>ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ :</u>**<br>2016-17 ರಲ್ಲಿ ಕರ್ನಾಟಕ ಕೌಶಲ್ಯ ಮಿಷನ್ ವತಿಯಿಂದ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆ ಹಾಗೂ ಪ್ರಧಾನಮಂತ್ರಿಗಳ ಕೌಶಲ್ಯ ವಿಕಾಸ ಯೋಜನೆಗಳು ಅನುಷ್ಠಾನಗೊಂಡಿದ್ದು, ಕಳೆದ ಎರಡು ವರ್ಷಗಳಿಂದಲೂ ಮುಂದುವರೆಸಿಕೊಂಡು, ರಾಜ್ಯದ ಯುವ ಜನತೆಗೆ ತರಬೇತಿ ನೀಡಿ, ಉದ್ಯೋಗಾವಕಾಶ ಕಲ್ಪಿಸಿಕೊಡಲಾಗುತ್ತಿದೆ.<br><br>**<u>ಡೇ-ನಲ್ಮ್:</u>**<br>ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಡೇ-ನಲ್ಮ್ ಅಭಿಯಾನದಡಿ ಕಳೆದ 2 ವರ್ಷಗಳಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ.<br><br>**1) ಸಾಮಾಜಿಕ ಕ್ರೋಢೀಕರಣ ಮತ್ತು ಸಾಂಸ್ಥಿಕ ಅಭಿವೃದ್ಧಿ:-**<br>ಸದರಿ ಉಪಘಟಕದಡಿ ಮಹಿಳಾ ಸ್ವ-ಸಹಾಯ ಸಂಘ, ಪ್ರದೇಶ ಮಟ್ಟದ ಒಕ್ಕೂಟಗಳ ರಚನೆ, ಆವರ್ತಕ ನಿಧಿ ವಿತರಣೆ ಹಾಗೂ ಸಂಘದ ಸದಸ್ಯರುಗಳಿಗೆ ವಿವಿಧ ಸಾಮರ್ಥ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. | **<u>Karnataka Skill Development Corporation:</u>**<br>Under The Karnataka Skill Mission, The Chief Minister's Kaushalya Karnataka Yojane (CMKKY) and The Pradhan Mantri Kaushal Vikas Yojana (PMKVY) are the two projects incorporated since 2016-17. It has been continued till date by providing the quality training for the youths of the state and also assisting them in the placements.<br>**<u>DAY-NULM</u>**<br>Deendayal Antyodaya Yojana-National Urban Livelihood Mission under Skill Development Entrepreneurship And Livelihood Department the following programmes are being implementing in Urban Local Bodies from last two years. The details of the programme is as follow;<br>1) **Social Mobilization and Institutional Development**:<br>Under this component, formation of women Self Help Group and their federation, distribution of revolving fund and Capacity Building to SHG members will be under taken. |

| | | |
|---|---|---|
| | **2) ಸ್ವಯಂ ಉದ್ಯೋಗ ಕಾರ್ಯಕ್ರಮ:-**<br>ಸದರಿ ಉಪಘಟಕದಡಿ ವೈಯಕ್ತಿಕ ಕಿರು ಉದ್ದಿಮೆ, ಗುಂಪು ಕಿರು ಉದ್ದಿಮೆ ಹಾಗೂ ಎಸ್‌ಹೆಚ್‌ಜಿ ಬ್ಯಾಂಕ್ ಕ್ರೆಡಿಟ್ ಲಿಂಕೇಜ್‌ಗೆ ಸಂಬಂಧಿಸಿದಂತೆ ಕ್ರಮವಾಗಿ ಬ್ಯಾಂಕಿನಿಂದ ರೂ.2.00 ಲಕ್ಷ , ರೂ.10.00 ಲಕ್ಷ ಮತ್ತು ರೂ.1.00 ಲಕ್ಷವರೆಗೆ ಬ್ಯಾಂಕಿನಿಂದ ಸಾಲ ಸೌಲಭ್ಯವನ್ನು ಕಲ್ಪಿಸಲಾಗುವುದು. ಶೇ.7 ಕ್ಕಿಂತ ಮೇಲ್ಪಟ್ಟ ಬಡ್ಡಿ ಸಹಾಯಧನವನ್ನು ಯೋಜನೆಯಿಂದ ಭರಿಸಿ ಪಾವತಿಸಲಾಗುವುದು ಹಾಗೂ ಸ್ವ-ಸಹಾಯ ಸಂಘಗಳು ನಿಯಮಿತವಾಗಿ ಸಾಲವನ್ನು ಮರು ಪಾವತಿಸಿದರೆ ಶೇ.3 ರಷ್ಟು ಹೆಚ್ಚುವರಿ ಬಡ್ಡಿ ಸಹಾಯಧನ ನೀಡಲಾಗುತ್ತಿದೆ. | **2)Self Employment Programme:**<br>Under this component, for establishment of Individual and Group enterprises Rs.2.00 lakhs and Rs.10.00 Lakhs loan will be given. Bank loan will be provided along with interest subsidy of over 7% of interest.<br>For SHGs bank credit linkage up to Rs.1.00 lakh loan along with over & above 7% interest subvention and additional 3% interest subvention will be provided for regular repayment. |
| | **3) ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಮತ್ತು ಸ್ಥಳ ನಿಯುಕ್ತಿ:-**<br>ಸದರಿ ಉಪಘಟಕದಡಿ ನಗರದ ನಿರುದ್ಯೋಗ ಯುವಕ/ಯುವತಿಯರಿಗೆ ವಿವಿಧ ಉದ್ಯೋಗಾಧಾರಿತ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ನೀಡಿ, ಪ್ರಮಾಣಿಕರಣ ಮತ್ತು ಮೌಲ್ಯಮಾಪನವನ್ನು ಕೈಗೊಂಡು, ಕೇಂದ್ರ ಸರ್ಕಾರದ ಪ್ರಮಾಣ ಪತ್ರವನ್ನು ನೀಡಿ, ತರಬೇತಿಯನ್ನು ಪಡೆದುಕೊಂಡ ಶೇ.70 ರಷ್ಟು ಅಭ್ಯರ್ಥಿಗಳಿಗೆ ಸ್ವಯಂ ಉದ್ಯೋಗ ಅಥವಾ ವೇತನಾಧಾರಿತ ಉದ್ಯೋಗವನ್ನು ಕಲ್ಪಿಸಲಾಗುತ್ತಿದೆ. | **3) Employment through Skill Training and Placement:**<br>Under this component, job oriented various skill training will be provided to urban un-employed youths free of cost. After assessment and certification 70% of trained candidate shall be provided wage and self-employment as per GoI guidelines. |
| | **4)ನಗರದ ವಸತಿ ರಹಿತರಿಗೆ ಆಶ್ರಯ:-**<br>ಸದರಿ ಉಪಘಟಕದಡಿ ನಗರದ ವಸತಿ ರಹಿತರನ್ನು ರ್‍ಯಾಪಿಡ್ ಸಮೀಕ್ಷೆಯ ಮೂಲಕ ಗುರುತಿಸಿ, ಆಶ್ರಯವನ್ನು ಕಲ್ಪಿಸಲಾಗುತ್ತಿದೆ. | **4)Shelter for Urban Homeless:**<br>Under this component, urban homeless are identified through rapid survey and provided 24X7 shelter facilities. |
| | **5)ನಗರದ ಬೀದಿ ವ್ಯಾಪಾರಸ್ಥರಿಗೆ ಬೆಂಬಲ:**<br>ಸದರಿ ಉಪಘಟಕದಡಿ ನಗರದ ಬೀದಿ ವ್ಯಾಪಾರಸ್ಥರನ್ನು ಗುರುತಿಸಿ, ಗುರುತಿನ ಚೀಟಿ ಮತ್ತು ಮಾರಾಟ ಪ್ರಮಾಣ ಪತ್ರವನ್ನು ವಿತರಿಸಲಾಗುತ್ತಿದೆ. | **5) Support to Urban Street Vendors:**<br>Under this component, street vendors are identified through survey, ID Card and Vending Certificate will be given to identified vendors. |
| | **6)ಸಾಮರ್ಥ್ಯ ಅಭಿವೃದ್ಧಿ ಮತ್ತು ತರಬೇತಿ:**<br>ಸದರಿ ಉಪಘಟಕದಡಿ ಅಭಿಯಾನವನ್ನು ಅನುಷ್ಠಾನಗೊಳಿಸಲು ತೊಡಗಿಸಿಕೊಂಡಿರುವ ಅಧಿಕಾರಿ / ಸಿಬ್ಬಂದಿಗಳಿಗೆ ವಿವಿಧ ಸಾಮರ್ಥ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ನೀಡಲಾಗುತ್ತಿದೆ. | **6)Capacity Building & Training:**<br>Under this component, training will be provided to Officials, staffs and other stake holders of the mission. |

## ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (NRLM):

ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಸಂಸ್ಥೆಯಡಿ ಕಳೆದ ಎರಡು ವರ್ಷಗಳ ಅವಧಿಯಲ್ಲಿ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ.

1. ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (ಎನ್‌ಆರ್‌ಎಲ್‌ಎಂ)
2. ದೀನ್‌ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ (ಡಿಡಿಯುಜಿಕೆವೈ)
3. ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆಗಳು (ಆರ್‌ಸೆಟಿ)

## ಸಿಡಾಕ್:

ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ(ಸಿಡಾಕ್)ದಿಂದ ಉದ್ಯಮಶೀಲತಾ ತಿಳುವಳಿಕೆ ಶಿಬಿರ, ಉದ್ಯಮಶೀಲತಾ ಪ್ರೇರಣಾ ಕಾರ್ಯಕ್ರಮ ಹಾಗೂ ವಿವಿಧ ಉದ್ಯಮಶೀಲತಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

## National Rural Livelihood Mission(NRLM)

The details of schemes implemented under Sanjeevini-KSRLPS during the last 2 Years are as below:

1. National Rural Livelihood Mission
2. Deen Dayal Upadhaya Grameen Kushalya Yojane
3. Rural Self Employment and Training Institutes.

## CEDOK

Centre for Entrepreneurship Development of Karntaka (CEDOK) conducted the following programmes during last two years.

1. Entrepreneurship Awareness Camps
2. Entrepreneurship Motivation Programme
3. Entrepreneurship development Programmes

---

**(ಆ) ಎಷ್ಟು ಜನ ಫಲಾನುಭವಿಗಳು ಈ ಯೋಜನೆಗಳ ಲಾಭ ಪಡೆದುಕೊಂಡಿದ್ದಾರೆ;**

## ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ :

ಇಲ್ಲಿಯವರೆವಿಗೂ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಡಿ ಹಾಗೂ ಪ್ರಧಾನಮಂತ್ರಿ ಶಲ್ಯ ಕರ್ನಾಟಕ ಯೋಜನೆಯಡಿ ತರಬೇತಿ ಪಡೆದ ಫಲಾನುಭವಿಗಳ ವಿವರ ಕೆಳಕಂಡಂತಿದೆ.

| ಕ್ರ. ಸಂ. | ಯೋಜನೆ | ಕೌಶಲ್ಯ ತರಬೇತಿ ಪಡೆದ ಅಭ್ಯರ್ಥಿಗಳ ಸಂಖ್ಯೆ |
|---|---|---|
| 1 | ಸಿಎಂಕೆಕೆವೈ | 109763 |
| 2 | ಪಿಎಂಕೆವಿವೈ | 20956 |

## Karnataka Skill Development Corporation (K.S.D.C)

Till date, the Chief Minister's Kaushalya Karnataka Yojane (CMKKY) and Pradhan Mantri Kaushal Vikas Yojana (PMKVY) total no. Of candidates trained details are given below:

| Sl.No | scheme | No of candidates trained |
|---|---|---|
| 1. | CMKKY | 109763 |
| 2. | PMKVY | 20956 |

**ಡೇ-ನಲ್ಮ್:**

ಯೋಜನೆಯಡಿ ಲಾಭ ಪ್ರಯೋಜನವನ್ನು ಪಡೆದುಕೊಂಡ ಫಲಾನುವಿಗಳ ಸಂಖ್ಯೆಗಳ ವಿವರ ಈ ಕೆಳಕಂಡಂತಿದೆ.

| ಕ್ರ. ಸಂ. | ಘಟಕದ ಹೆಸರು | 2019-20 | 2020-21 |
|---|---|---|---|
| 1 | ಸಾಮಾಜಿಕ ಕ್ರೋಢೀಕರಣ & ಸಾಂಸ್ಥಿಕ ಅಭಿವೃದ್ಧಿ | 2260 | 1420 |
| 2 | ಸ್ವಯಂ ಉದ್ಯೋಗ ಕಾರ್ಯಕ್ರಮ | 1971 | 1355 |
| 3 | ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಮತ್ತು ಸ್ಥಳ ನಿಯುಕ್ತಿ | 6792 | 20962 |
| ೪ | ನಗರದ ವಸತಿ ರಹಿತರಿಗೆ ಆಶ್ರಯ | 780 | 989 |
| 5 | ನಗರದ ಬೀದಿ ವ್ಯಾಪಾರಸ್ಥರಿಗೆ ಬೆಂಬಲ | 22926 | 20043 |

**ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (NRLM):**

ಕಳೆದ 2 ವರ್ಷಗಳಲ್ಲಿ, ಈ ಯೋಜನೆಗಳಡಿ ಅನುಕೂಲ ಪಡೆದುಕೊಂಡಿರುವ ಫಲಾನುಭವಿಗಳ ವಿವರ ಕೆಳಕಂಡಂತಿವೆ.

| ಕ್ರ. ಸಂ. | ಯೋಜನೆ | ಫಲಾನುಭವಿಗಳ/ಸ್ವಸಹಾಯ ಗುಂಪುಗಳ ಸಂಖ್ಯೆ |
|---|---|---|
| 1 | ಎನ್‌ಆರ್‌ಎಲ್‌ಎಂ | 53302 (ಸ್ವ.ಸ.ಗು) |
| 2 | ಡಿಡಿಯುಜಿಕೆವೈ | 6376 |
| 3 | ಆರ್‌ಸೆಟಿ | 41012 |

**ಸಿಡಾಕ್:**

| ವಿವರ | ವರ್ಷ | |
|---|---|---|
| | 2019-20 | 2020-21 |
| ತರಬೇತಿ ಪಡೆದ ಅಭ್ಯರ್ಥಿಗಳ ಸಂಖ್ಯೆ | 23356 | 2308 |

**DAY-NULM**

Details given below:

| Sl No | Name of the Component | 2019-20 | 2020-21 |
|---|---|---|---|
| 1 | Social Mobilisation and Institutional Development | 2260 | 1420 |
| 2 | Self-Employment Programme | 1971 | 1355 |
| 3 | Employment through Skill Training and Placement | 6792 | 20962 |
| 4 | Shelter for Urban Homeless | 780 | 989 |
| 5 | Support to Urban Street Vendors | 22926 | 20043 |

**National Rural Livelihood Mission(NRLM)**

The details of beneficiaries during the last 2 Years under these programs are detailed below;

| Sl.No | scheme | No of beneficiaries/ Self Help Groups |
|---|---|---|
| 1. | NRLM | 53302(SHG) |
| 2. | DDUGKY | 6376 |
| 3. | RSETI | 41012 |

**CEDOK**

| Particulars | Years | |
|---|---|---|
| | 2019-20 | 2020-21 |
| Number of candidates trained | 23356 | 2308 |

| | | |
|---|---|---|
| (ಇ) ಕೋವಿಡ್- ಕಾರಣಕ್ಕೆ ನಿರುದ್ಯೋಗಕ್ಕೆ ಒಳಗಾದ ಯುವಕರಿಗೆ ಈ ಯೋಜನೆಗಳಿಗೆ ತರಬೇತಿ ಹಾಗೂ ಉದ್ಯೋಗವಕಾಶವನ್ನು ಒದಗಿಸಲಾಗುವುದೇ? | ಹೌದು.<br><br>ಕೋವಿಡ್ ಕಾರಣಕ್ಕೆ ನಿರುದ್ಯೋಗಕ್ಕೆ ಒಳಗಾದ ಯುವ ಜನತೆಗೆ ವರ್ಚುಯಲ್ ಜಾಬ್ ಮೇಳಗಳನ್ನು ಹಾಗೂ ಜಿಲ್ಲಾ ಮಟ್ಟದಲ್ಲಿ ಮಿನಿ ಉದ್ಯೋಗ ಮೇಳಗಳನ್ನು ಏರ್ಪಡಿಸಲಾಗಿದ್ದು. ಈ ಮೂಲಕ 2020-21 ನೇ ಸಾಲಿನಲ್ಲಿ 3776 ಅಭ್ಯರ್ಥಿಗಳಿಗೆ ಹಾಗೂ 2021-22 ನೇ ಸಾಲಿನಲ್ಲಿ 8513 ಅಭ್ಯರ್ಥಿಗಳಿಗೆ ಉದ್ಯೋಗ ಕಲ್ಪಿಸಲಾಗಿರುತ್ತದೆ. ಈಗಾಗಲೇ ಹಲವಾರು ಕೈಗಾರಿಕಾ ಸಂಸ್ಥೆ / ಸಂಘಗಳೊಂದಿಗೆ (ಉದಾ: ELCIA/Filpkart-Instrakart/ Mysore Industrial Association, ESDM Cluster, Mysore & ಇತರೆ) ಒಡಂಬಡಿಕೆಯನ್ನು ಮಾಡಿಕೊಂಡಿದ್ದು, ತರಬೇತುದಾರ ಸಂಸ್ಥೆಗಳೊಂದಿಗೆ ಹೆಚ್ಚಿನ ಕೌಶಲ್ಯಾಧಾರಿತ ತರಬೇತಿಯೊಂದಿಗೆ ಉದ್ಯೋಗ ದೊರಕಿಸುವ ಕ್ರಮವನ್ನು ಕೈಗೊಳ್ಳಲಾಗುತ್ತಿದೆ.<br><br>ಕೆ.ಎಸ್.ಡಿ.ಸಿ.ಯಿಂದ Skill Connect Kaushalkar.com ಮೂಲಕ 27 ಜಿಲ್ಲೆಗಳಲ್ಲಿ ಆನ್‌ಲೈನ್ ಉದ್ಯೋಗ ಮೇಳಗಳನ್ನು ನಡೆಸಲಾಗಿದೆ. ಇವುಗಳಲ್ಲಿ 522 ಕಂಪನಿಗಳು ಭಾಗವಹಿಸಿದ್ದು, 25204 ಅಭ್ಯರ್ಥಿಗಳು ಭಾಗವಹಿಸಿರುತ್ತಾರೆ. ಒಟ್ಟು 8513 ಅಭ್ಯರ್ಥಿಗಳಿಗೆ ನೇಮಕಾತಿ ಪತ್ರಗಳನ್ನು ನೀಡಲಾಗಿದೆ.<br><br>ಮುಂದುವರೆದು, ಕೋವಿಡ್-19 ಸಾಂಕ್ರಮಿಕದಿಂದ ಎಲ್ಲಾ ಕೌಶಲ್ಯ ತರಬೇತಿ ಕಾರ್ಯಕ್ರಮಗಳನ್ನು ಸ್ಥಗಿತಗೊಳಿಸಲಾಗಿತ್ತು, ಪ್ರಸ್ತುತ ಜುಲೈ 2021ರಿಂದ ಕೌಶಲ್ಯ ತರಬೇತಿ ಕಾರ್ಯಕ್ರಮಗಳನ್ನು ಪ್ರಾರಂಭಿಸಿರುವುದರಿಂದ ತರಬೇತಿ ಪೂರ್ಣಗೊಂಡ ನಂತರ ಉದ್ಯೋಗವಕಾಶಕ್ಕೆ ಕ್ರಮವಹಿಸಲಾಗುವುದು. ಮತ್ತು ಸ್ವ-ಉದ್ಯೋಗ ಕೈಗೊಳ್ಳಲು ಆಸಕ್ತಿ ಹೊಂದಿದ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿ, ಅವರಿಗೆ ಉದ್ಯಮಶೀಲತಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಹಾಗೂ ಅವರ ಸ್ವಯಂ ಉದ್ಯೋಗ ಸ್ಥಾಪನೆಯಲ್ಲಿ ಮಾರ್ಗದರ್ಶನ ಹಾಗೂ ಬೆಂಬಲ ಸೇವೆ ನೀಡಲಾಗುತ್ತಿದೆ. | Yes,<br><br>Due to Covid-19 pandemic, many unemployed youths are employed through the Virtual Job Fair and Mini Job Fair which are organized at the District Level. For the year 2020-21, total of 3,776 candidates and in the year 2021-22, total of 8,513 candidates were placed / employed. Till date, many companies, Industrial agencies (for example: ELCIA / Flipkart-Instakart / Mysore Industrial Association / ESDM Cluster, Mysore & others) were invited and the department has signed MoUs with the companies and directed the training providers to increase the level of skill based training at their Training Centers.<br><br>Through Karnataka Skill Development Corporation through Kaushalkar.com in 27 districts online Udhyoga Melas were conducted. In these Udhyoga Melas 522 companies & 25204 candidates' participated and total 8513 candidates were given appointment letters.<br><br>Due to Covid-19 pandemic all the Skill training Programmes were stopped. From July-2021 Skill training Programmes have commenced, action will be taken for placement of the candidates after completion of Skill Training. Interested candidates who have completed Skill Development Training will be identified and imparted Entrepreneurship Development Training for setting up of their self-employment enterprises. Necessary guidance and hand-holding supports will be given. |

| | | |
|---|---|---|
| | ಪ್ರಧಾನ ಮಂತ್ರಿ ಕೌಶಲ್ಯ ವಿಕಾಸ ಯೋಜನೆಯಡಿ ಆರೋಗ್ಯ ವಲಯದಲ್ಲಿ 06 ಜಾಬ್‌ರೋಲ್‌ಗಳನ್ನು ಒಂದು ತಿಂಗಳ ತರಬೇತಿಯನ್ನು ನೀಡಲು ಆಯ್ಕೆ ಮಾಡಿದ್ದು. 22 ಆರೋಗ್ಯ ಇಲಾಖೆಯ ಜಿಲ್ಲಾ ತರಬೇತಿ ಕೇಂದ್ರಗಳಲ್ಲಿ NSDC ಯಿಂದ ಮಾನ್ಯತೆ ಪಡೆದು. ತರಬೇತಿಯನ್ನು ನಡೆಸಲಾಗುತ್ತಿದೆ. 2160 ಅಭ್ಯರ್ಥಿಗಳಿಗೆ ಈ ತರಬೇತಿಯನ್ನು ನೀಡಲು ಜಿಲ್ಲಾ ತರಬೇತಿ ಕೇಂದ್ರಗಳಿಗೆ ನಿಗಧಿಪಡಿಸಲಾಗಿದೆ.<br><br>ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮವು 41700 ವಲಸೆ ಕಾರ್ಮಿಕರನ್ನು ಸೇವಾ ಸಿಂಧು ಪೋರ್ಟಲ್ ಮುಖಾಂತರ ಮಾಹಿತಿ ಪಡೆದು ಸಂಪರ್ಕಿಸಿದ್ದು. ಈ ಕಾರ್ಮಿಕರಲ್ಲಿ 1658 ಕಾರ್ಮಿಕರು ಉದ್ಯೋಗವನ್ನು ಪಡೆಯಲು ಹಾಗೂ 3566 ಕಾರ್ಮಿಕರು ಕೌಶಲ್ಯ ತರಬೇತಿಯನ್ನು ಪಡೆಯಲು ಇಚ್ಛಿಸಿದ್ದು, ಅಭ್ಯರ್ಥಿಗಳಿಗೆ ತರಬೇತಿಯನ್ನು ನೀಡಲಾಗಿದೆ. | Under Pradhan Manthri Kaushalya Vikas Yojane 01 month training for 6 job roles of Health sector 22 district Training centres of Health and Family welfare department have been accredited with NSDC (National Skill Development Corporation) for conducting the training. A target of 2160 candidates have been fixed to these District Training Centres.<br><br>Karnataka Skill Development Corporation has contacted 41700 migrant labours from Seva Sindhu Portal, Out of these 1658 candidates have shown interest in employment and 3556 candidates have shown interest in Skill Training and Skill Training is being imparted. |

ಸಂಖ್ಯೆ: ಕೌಉಜೀಇ 47 ಉಜೀಪ್ರ 2021

(ಡಾ॥ ಸಿ.ಎನ್. ಅಶ್ವಥ್‌ನಾರಾಯಣ)
ಉನ್ನತ ಶಿಕ್ಷಣ. ಐಟಿ/ಬಿಟಿ
ಹಾಗೂ ಕೌಶಲ್ಯಾಭಿವೃದ್ಧಿ. ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖಾ ಸಚಿವರು.